Compost, Bio-Gas ಉತ್ಪಾದಿಸಲು ಹಾಗೂ ಪ್ಲಾಸ್ಟಿಕ್ ವಿಂಗಡಿಸಲು ಮತ್ತು landfill ಗೆ ವೈಜ್ಞಾನಿಕವಾಗಿ ವಿಲೇ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ದಿನಾಂಕ: 31-12-2011 ರವರಿಗೆ ಅಧಿಕಾರ ಪತ್ರ ನೀಡಲಾಗಿದೆ. ಈ ಪತ್ರದನ್ವಯ, ಸದರಿ ಸಂಸ್ಥೆಯು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಷರತ್ತು ಬದ್ಧ ನಿಯಮಾವಳಿಯನ್ನು ಪಾಲಿಸಬೇಕಾಗಿರುತ್ತದೆ. ಈ ಸಂಸ್ಥೆಯು ಕಳೆದ 2 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯು ನಿಯಮಾನುಸಾರ ಆಗಿಂದ್ದಾಗ್ಗೆ ಪರಿವೀಕ್ಷಣೆ ಮಾಡಿ, ಸಂಸ್ಥೆಯು ತೆಗೆದುಕೊಂಡಿರುವ ಕ್ರಮಗಳನ್ನು ಖಾತ್ರಿ ಪಡಿಸಿಕೊಂಡಿರುತ್ತದೆ.

iii) ಕಲುಷಿತ ನೀರಿನ ಪ್ರಭಾವದಿಂದ ಜನ-ಜಾನುವಾರು ಅನಾರೋಗ್ಯದಿಂದ ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಹುದ್ದೆಗಳ ವಿವರ

210 (886) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) :- ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಪಶುಸಂಗೋಪನಾ ಇಲಾಖೆಯಲ್ಲಿ ಮಂಜೂರಾದ ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ಹುದ್ದೆವಾರು ವಿವರ ಒದಗಿಸುವುದು)

(ಆ) ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿಯೋಜಿಸಲಾದ ಹುದ್ದೆಗಳ ಸಂಖ್ಯೆ ಎಷ್ಟು; ಯಾವುವು ಹಾಗೂ ಯಾವ ಕಾರಣದಿಂದ ನಿಯೋಜಿಸಲಾಗಿದೆ; (ವಿವರ ನೀಡುವುದು) ;

(ಇ) ಭಾರತೀಯ ಆಡಳಿತ ಸೇವೆ ಅಧಿಕಾರ ವರ್ಗದ ಆಯುಕ್ತರ ಹುದ್ದೆಯನ್ನು ಪಶು ಸಂಗೋಪನಾ ಇಲಾಖಾ ಸಮಗ್ರ ಪುನರ್ ರಚನೆ ಅಂಗವಾಗಿ ಸೃಷ್ಟಿಸಿರುವುದು ನಿಜವೇ; ಸದರಿ ಹುದ್ದೆಯನ್ನು ಸೃಷ್ಟಿಸಿ ಎಷ್ಟು ವರ್ಷಗಳಾದವು; ಸಮಗ್ರ ಪುನರ್ ರಚನೆ ಯಾವಾಗ ಮಾಡಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):-

(ಅ) ಪಶು ಸಂಗೋಪನಾ ಇಲಾಖೆಯಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ :

ಕ್ರ ಸಂ.	ವೃಂದ	ಮಂಜೂರು	ಭರ್ತಿ	ಖಾಲಿ
1	ಆಯುಕ್ತರು	1	1	0
2	ನಿರ್ದೇಶಕರು	1	1	0
3	ಅಪರ ನಿರ್ದೇಶಕರು	3	3	0
4	ಜಂಟಿ ನಿರ್ದೇಶಕರು	8	8	0
5	ಉಪನಿರ್ದೇಶಕರು	56	56	0
6	ಉಪನಿಯಂತ್ರಕರು	1	1	0
7	ಸಹಾಯಕ ನಿರ್ದೇಶಕರು	488	381	107
8	ಕೇಂದ್ರ ಕಛೇರಿ ಸಹಾಯಕರು	2	2	0
9	ಪಶುವೈದ್ಯಾಧಿಕಾರಿಗಳು	2393	1756	637
10	ಆಡಳಿತ ಸಹಾಯಕರು	10	10	0
11	ಸಹಾಯಕ ನಿರ್ದೇಶಕರು (ಅಂಕಿ ಅಂಶ)	3	2	1
12	ಜಾನುವಾರು ಅಧಿಕಾರಿಗಳು	309	259	50
13	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	2102	1982	120
14	ಪಶುವೈದ್ಯಕೀಯ ಪರೀಕ್ಷಕರು	1842	1532	310
15	ಪಶುವೈದ್ಯಕೀಯ ಸಹಾಯಕರು	1984	747	1237
16	ಅಧೀಕ್ಷಕರು	70	63	07
17	ಪ್ರಥಮ ದರ್ಜೆ ಸಹಾಯಕರು	178	158	20
18	ದ್ವಿತೀಯ ದರ್ಜೆ ಸಹಾಯಕರು	282	282	0
19	ಶೀಘ್ರಲಿಪಿಗಾರರು	16	07	09
20	ಹಿರಿಯ ಬೆರಳಚ್ಚುಗಾರರು	11	10	01
21	ಬೆರಳಚ್ಚುಗಾರರು	90	77	13
22	ವಾಹನ ಚಾಲಕರು	296	209	87
23	ಡಿ–ದರ್ಜೆ ನೌಕರರು	7271	4599	2672
	ಒಟ್ಟು	**17417**	**12146**	**5271**

ಎಲ್ಲಾ ವೃಂದದ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿಯೋಜಿಸಲಾದ ಹುದ್ದೆಗಳ ವಿವರ:

ಕ್ರ ಸಂ.	ವೃಂದ	ನಿಯೋಜಿಸಿದ ಹುದ್ದೆ ಸಂಖ್ಯೆ	ಕಾರಣ
1	ಅಪರ ನಿರ್ದೇಶಕರು	1	ಆಡಳಿತಾತ್ಮಕ ಹಿತದೃಷ್ಟಿಯಿಂದ
2	ಜಂಟಿ ನಿರ್ದೇಶಕರು	1	
3	ಉಪನಿರ್ದೇಶಕರು	2	
4	ಸಹಾಯಕ ನಿರ್ದೇಶಕರು	2	
5	ಪಶುವೈದ್ಯಾಧಿಕಾರಿಗಳು	5	
6	ಆಡಳಿತ ಸಹಾಯಕರು	1	
7	ಜಾನುವಾರು ಸಹಾಯಕರು	10	ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ವೈದ್ಯಕೀಯ ಕಾರಣ
8	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	40	
9	ಪಶುವೈದ್ಯಕೀಯ ಪರೀಕ್ಷಕರು	21	
10	ಪಶುವೈದ್ಯಕೀಯ ಸಹಾಯಕರು	3	ಆಡಳಿತಾತ್ಮಕ ಹಿತದೃಷ್ಟಿಯಿಂದ
11	ಅಧೀಕ್ಷಕರು	10	ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ವೈದ್ಯಕೀಯ ಕಾರಣ
12	ಪ್ರಥಮ ದರ್ಜೆ ಸಹಾಯಕರು	09	
13	ದ್ವಿತೀಯ ದರ್ಜೆ ಸಹಾಯಕರು	08	
14	ಬೆರಳಚ್ಚುಗಾರರು	6	
15	ವಾಹನ ಚಾಲಕರು	1	ಆಡಳಿತಾತ್ಮಕ ಹಿತದೃಷ್ಟಿಯಿಂದ
16	ಡಿ–ದರ್ಜೆ–ನೌಕರರು	29	ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ವೈದ್ಯಕೀಯ ಕಾರಣ
	ಒಟ್ಟು	149	

ಇ) ಇಲಾಖೆಯ ಅಭಿವೃದ್ಧಿಗಾಗಿ ಭಾರತೀಯ ಆಡಳಿತ ಸೇವೆ ಅಧಿಕಾರಿಯವರ ಹುದ್ದೆಯನ್ನು ದಿನಾಂಕ: 27–12–2004 ರಂದು ಸೃಷ್ಟಿಸಲಾಗಿದ್ದು, ಸದರಿ ಹುದ್ದೆಯನ್ನು ಸೃಷ್ಟಿಸಿ 8 ವರ್ಷಗಳಾಗಿದೆ.

ಪ್ರಸ್ತಾವನೆ ಪರಿಶೀಲನೆಯಲ್ಲಿದೆ.